Sri S. R. KANTHI.—The system was somewhat different. There was the Advocate General, there was the Assistant Advocate General and there were also nine Government Pleaders.

Sri V. N. PATIL.—Has it come to the notice of Government that this new panel system has not resulted in efficient working of the High Court ?

Sri S. R. KANTHI.—No, Sir, that is not a fact. I have made enquiries with the High Court and they say that the present system is quite effective.

Bridge across Sogali Halla

*Q.—223. Sri S. M. GURADDI (Muddebihal).—

Will the Minister for Public Works be pleased to state:—

(*a*) whether it has come to their notice that the traffic would be stopped on Muddebihal-Talikote road during rainy season for want of bridge across Sogali Halla ;

(*b*) whether plan and estimates have been prepared for the construction of the bridge across Sogalihalla ?

A.—Sri VEERENDRA PATIL (Minister for Public Works).—

(*a*) Yes.

(*b*) Yes.

ಶ್ರೀ ಎಸ್. ಎಂ. ಗುರೆಡ್ಡಿ.—ಇದು ಬಹಳ ಮಹತ್ವವಾದ ರೋಡಾಗಿರುವುದರಿಂದ ಇದನ್ನು ನ್ಯಾಷನಲ್ ಹೈ ವೇ ಆಗಿ ಮಾಡುವುದಕ್ಕೆ ಸಾಧ್ಯವಿಲ್ಲವೇ ? ಯಾವಾಗ ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದು ಸೋಗಲಿ ಹಳ್ಳಕ್ಕೆ ಅಡ್ಡಲಾಗಿ ಸೇತುವೆಯನ್ನು ನಿರ್ಮಿಸುವುದು. ಆದ್ದರಿಂದ ಈ ಸೇತುವೆಗೆ ಸಂಬಂಧಪಟ್ಟಹಾಗೆ ಮಾಹಿತಿಯನ್ನು ಕೇಳಿದರೆ ನಾನು ಹೇಳುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈ ಸೇತುವೆ ಬಹಳ ಮುಖ್ಯವಾದ ಸೇತುವೆಯಾಗಿರುವುದರಿಂದ ಇದರ ಪ್ಲಾನು ಮತ್ತು ಎಸ್ಟಿಮೇಟು ತಯಾರಾಗಿದೆಯೇ, ಇದಕ್ಕೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದಹಾಗೆ ಇದು ಬಹಳ ಮುಖ್ಯವಾದ ರಸ್ತೆ. ಅದರಮೇಲೆ ಸೇತುವೆ ಆಗಬೇಕಾದ್ದು ಬಹಳ ಅವಶ್ಯ ಎಂದು ತಿಳಿದು ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಾವು ಬರೆದಿದ್ದೆವು ಅವರು ಸೆಂಟ್ರಲ್ ರೋಡ್ ಫಂಡ್ ಪ್ರೋಗ್ರಾಮ್ ಪ್ರಕಾರ ಇದನ್ನು ಮಂಜೂರುಮಾಡಿ ನಮ್ಮ ಹತ್ತಿರ ಕಳುಹಿಸಿಕೊಟ್ಟಿದ್ದಾರೆ. ಅದರ ಪ್ಲಾನು ಮತ್ತು ಎಸ್ಟಿಮೇಟು ಚೀಫ್ ಇಂಜಿನಿಯರ ಆಫೀಸಿಗೆ ಬಂದಿವೆ. ಅದರ ಸ್ಕ್ರುಟಿನಿ ಆಗುತ್ತಿದೆ. ಆದಷ್ಟು ತೀವ್ರವಾಗಿ ಆ ಕೆಲಸವನ್ನು ಮಾಡಬೇಕೆಂದು ಆ ಕೆಲಸಕ್ಕೆ ಟೆಂಡರ್ ಕರೆದಿದ್ದೇವೆ.